೨. ಮಾರಾಟ ತೆರಿಗೆ ಕಾನೂನಿನ ಪ್ರಕಾರ ಸರಕು ಸಾರಿಗೆ ವಾಹನಗಳಲ್ಲಿ ಒಯ್ಯಲಾಗು ತ್ತಿರುವ ಸರಕುಗಳಿಗೆ ಸಂಬಂಧಪಟ್ಟಂತೆ ವಿಕ್ರಿ ಬಿಲ್ಲು (ಸೇಲ್ಸ್ ಬಿಲ್ಲು) ಅಗಲೀ ಅಥವಾ ಇಲಾಖೆಯಿಂದ ಪಡೆದ ನಮೂನೆ ೫೯ ಡೆಲಿವರಿ ನೋಟ್ (ಫಾರಂ ೫೯ ಡೆಲಿವರಿ ನೋಟ್) ಇರಬೇಕು ಹಾಗೂ ಇಂಥ ಬಿಲ್ಲು ಅಥವಾ ಡೆಲಿವರಿ ನೋಟಿನ ಒಂದು ಪ್ರತಿಯನ್ನು ಶೋಧನಾ ಠಾಣೆಯಲ್ಲಿ ಸಲ್ಲಿಸಬೇಕೆಂಬ ಕಾನೂನು ಇದೆ. ಈ ನಿಬಂಧನೆಯನ್ನು ಪಾಲಿಸದಿದ್ದರೆ ಶೋಧನಾ ಠಾಣೆಯ ಅಧಿಕಾರಿ ದಂಡ ವಿಧಿಸ ಬಹುದು, ಒಂದು ಸಮಯ ಸರಕನ್ನು ಸಾಗಿಸುವವರು ವರ್ತಕರಲ್ಲದ ಪಕ್ಷದಲ್ಲಿ. ಅಂಥವರನ್ನು ದಂಡಿಸ ಬಾರದೆಂಬ ಕ್ರಮವಿದೆ.

೩. ಸ್ವಂತ ಬೇಸಾಯದಿಂದ ಬೆಳೆದ ಬೆಳೆಯನ್ನು ಸಾಗಿಸುವ ರೈತರು ಮಾರಾಟ ತೆರಿಗೆಯ "ವರ್ತಕರು" (ಡೀಲರ್ಸ್) ಎಂಬ ವ್ಯಾಖ್ಯೆಯಲ್ಲಿ ಬರುವುದಿಲ್ಲ. ಆದ್ದರಿಂದ ರೈತರು ತಾವು ಬೆಳೆದ ಮಾಲನ್ನು ಸಾಗಿಸುವಾಗ, ಅದು ಹಾಗೆಂದು ತೋರಿಸಲು ಆಯಾಯ ಊರಿನ ಗ್ರಾಮ ಲೆಕ್ಕಿಗರ ಪ್ರಮಾಣ ಪತ್ರ ತೋರಿಸುವ ವಾಡಿಕೆ ಇದೆ. ಈ ಕ್ರಮವನ್ನು ಪಾಲಿಸಿದಾಗ ಸಾಗಾಣಿಕೆಯಲ್ಲಿರುವ ಮಾಲು ರೈತರದೆಂದು ಖಾತ್ರಿಯಾಗಿ ಶೋಧನಾ ಠಾಣೆಯ ಅಧಿಕಾರಿ ಆಂಥ ಸರಕು ಸಾರಿಗೆ ವಾಹನ ವನ್ನು ನಿರಾತಂಕವಾಗಿ ಹೋಗಲು ಬಿಡುತ್ತಾರೆ.

೪. ಆದರೆ ಅನೇಕ ಕಳ್ಳ ವರ್ತಕರು ತಾವೇ ರೈತರ ಮನೆ ಬಾಗಿಲಿಗೆ ಹೋಗಿ ಅವರ ಮಾಲನ್ನು ಖರೀದಿಸಿ ಸ್ವಂತವಾಗಿ ಸಾಗಿಸುತ್ತಿದ್ದರೂ ತೆರಿಗೆ ತೆರುವುದನ್ನು ತಪ್ಪಿಸಲು ರೈತರ ಮಾಲೆಂಬ ಸಬೂಬು ಹೇಳಿ ಪಾರಾಗಲು ಪ್ರಯತ್ನಿಸಿದ ಅನೇಕ ಪ್ರಸಂಗಗಳು ವಾಣಿಜ್ಯ ತೆರಿಗೆ ಇಲಾಖೆಯ ಗಮನಕ್ಕೆ ಬಂದಿವೆ ಉದಾಹರಣೆಗೆ ಬಾಡಿಗೆ ಪ್ರದೇಶದಿಂದ ಮುಂಬಯಿಗೆ ಒಣ ಮೆಣಸಿನ ಕಾಯಿ, ಬಳ್ಳಾರಿ ಜಿಲ್ಲೆಯಿಂದ ಆಂಧ್ರಕ್ಕೆ ಹತ್ತಿ, ಮೈಸೂರು ಜಿಲ್ಲೆಯ ಕೆಲವು ತಾಲೂಕುಗಳಿಂದ ತಮಿಳ್ನಾಡಿಗೆ ಹತ್ತಿ, ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಿಂದ ಮಹಾರಾಷ್ಟ್ರಕ್ಕೆ ಕಬ್ಬು, ಬೀದರ್ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ದ್ವಿದಳ ಧಾನ್ಯಗಳು ಇತ್ಯಾದಿ.

೫. ಆದ್ದರಿಂದ ಶೋಧನಾ ಠಾಣೆಯಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಒಕ್ಕಲುತನ ಹುಟ್ಟುವಳಿಯ ಸರಕಿನ ಸಾಗಾಣಿಕೆ ಕಂಡುಬಂದಲ್ಲಿ ಅದು ರೈತರದ್ದೇ ಎಂಬುದನ್ನು ಖಾತ್ರಿ ಮಾಡಿ ಕೊಳ್ಳಲು ಬಹಳ ಎಚ್ಚರಿಕೆಯಿಂದ ವಿಚಾರಿಸುತ್ತಾರೆ ಮತ್ತು ಆ ಬಗ್ಗೆ ನಿಖರವಾದ ಪ್ರಮಾಣ ಹಾಗೂ ದಾಖಲೆಯನ್ನು ನೋಡುತ್ತಾರೆ. ಇದರ ವಿನಃ ಮಾರಾಟಕರ ಶೋಧನಾ ಠಾಣೆಗಳಿಗೂ ಹಾಗೂ ರೈತರಿಗೂ ಯಾವುದೇ ಸಂಬಂಧ ಬೀಳುವುದಿಲ್ಲ. ಕೆಲವು ಸಲ ಅಪ್ರಮಾಣಿಕ ವರ್ತಕರು ಇಂಥ ಜಾಗರೂಕ ವಿಚಾರಣೆಯನ್ನು ಕೆಡಿಸಲು ರೈತರ ಹೆಸರು ಹೇಳಿ ವಿನಾ ಕಾರಣ ಗಲಾಟೆ ಮಾಡಿದ್ದುಂಟು.

ಳ) ಸವದತ್ತಿ ತಾಲ್ಲೂಕು ಕೊಟಕನಹಳ್ಳಿ ಮತ್ತು ಅಪ್ಪಳದಿನ್ನಿ ಮುಂತಾದ ಗ್ರಾಮಗಳಿಗೆ ವಿದ್ಯುತ್ ಒದಗಿಸದೇ ಇರುವುದರ ಬಗ್ಗೆ

ಶ್ರೀ ಶಿವಾನಂದ ಎಸ್. ಕೌಲಗಿ. (ಬೈಲಹೊಂಗಲ) —ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಸವದತ್ತಿತಾಲ್ಲೂಕು ಪೈಕಿ ಕೊಟರನಟ್ಟಿ(ಮಜರೆಹಿರೇಬೂದನೂರು)ಮತ್ತು ಅಪ್ಪಳದಿನ್ನಿ ಮತ್ತು ಮಜರೆ ಹಿರೇಬೂದನೂರು ಮತ್ತು ರುದ್ರಾಪುರ ತಾಂಡಾಗಳಿಗೆ ಇನ್ನೂ ವರೆಗೆ ವಿದ್ಯುತ್ ಸೌಕರ್ಯ ಒದಗಿಸಿರು ವುದಿಲ್ಲ. ಈ ೩ ಊರಿನ ಜನರು ಸರಕಾರಕ್ಕೆ ತಮ್ಮ ಗ್ರಾಮಗಳಿಗೆ ವಿದ್ಯುತ್‌ನ್ನು ಒದಗಿಸಬೇಕೆಂದು ಮತ್ತು ಈ ಊರುಗಳಲ್ಲಿ ನೂರಕ್ಕೆ ೯೫ರಷ್ಟು ಜನರು ಎಸ್. ಸಿ. ಮತ್ತು ಎಸ್. ಟಿ. ಡಿ. ಜನರಿದ್ದು ತಕ್ಷಣ ಇಲ್ಲಿ ವಿದ್ಯುತ್ತನ ಸೌಕರ್ಯವನ್ನು ಒದಗಿಸುವ ಸಲುವಾಗಿ ನಾನು ತಮ್ಮ ಮುಖಾಂತರ ವಿದ್ಯುತ್ ಶಾಖೆಯ ಮಂತ್ರಿಗಳಿಗೆ ಗಮನ ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುತ್ ಖಾತೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಇದುವರೆಗೆ ನಾವು ಎಲ್ಲಾ ಮುಖ್ಯ ಹಳ್ಳಿಗಳಿಗೂ ವಿದ್ಯುತ್ತಿನ ಪೂರೈಕೆಯನ್ನು ಮಾಡುತ್ತಾ ಬಂದಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಪ್ರದೇಶಗಳು ಮಜರೆ ಗ್ರಾಮಗಳು ಮತ್ತು ತಾಂಡಾ ಗಳಾಗಿರುತ್ತವೆ. ಈ ವರ್ಷದ ಯೋಜನೆಯಲ್ಲಿ ಇವುಗಳನ್ನು ಸೇರಿಸಿ ವಿದ್ಯುದ್ದೀಕರಣ ಮಾಡಿಸಿ ಕೊಡಲು ಪ್ರಯತ್ನಿಸುತ್ತೇನೆಂದು ಹೇಳಬಯಸುತ್ತೇನೆ.